**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

ದಿನಾಂಕ: 23.01.2014

ಸಂಖ್ಯೆ: ಕಸಂವಿ/ಪ್ರ.ಪ./2013–14

ಮಾನ್ಯರೆ,

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಿಕ್ಷಣ ಪರಿಷತ್ತಿನ** ಹತ್ತನೇ ಸಭೆಯು **ಜನವರಿ 20, 2014ರ ಸೋಮವಾರ ಪೂರ್ವಾಹ್ನ 11.00** ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳು ವಹಿಸಿದ್ದರು. ಈ ಪತ್ರದೊಂದಿಗೆ ಆ ದಿನ ನಡೆದ ಸಭೆಯ ನಡಾವಳಿಯನ್ನು ತಮ್ಮ ಅವಗಾಹನೆಗೆ ಕಳುಹಿಸಿಕೊಡಲಾಗಿದೆ.

ಈ ಸಭೆಯ ನಡಾವಳಿಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪತ್ರದ ದಿನಾಂಕದಿಂದ ಹತ್ತು ದಿನಗಳೊಳಗಾಗಿ ಸಲ್ಲಿಸಲು ಕೋರಲಾಗಿದೆ.

ವಂದನೆಗಳೊಂದಿಗೆ,

**ಕುಲಸಚಿವರು**

ಇವರಿಗೆ,

1. **ಸರ್ಕಾರದ ಪ್ರಧಾನ ಕಾರ್ಯದರ್ಶಿ**, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), 6ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು – 560001.
2. **ಸರ್ಕಾರದ ಜಂಟಿ ಕಾರ್ಯದರ್ಶಿ**, ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ವಿಧಾನಸೌಧ, ಬೆಂಗಳೂರು – 560001.
3. **ಸರ್ಕಾರದ ಕಾರ್ಯದರ್ಶಿ**, ಕಂದಾಯ ಇಲಾಖೆ, (ಧಾರ್ಮಿಕ ದತ್ತಿ ವಿಭಾಗ), ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು–560001.
4. **ನಿರ್ದೇಶಕರು**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು.
5. **ಆಯುಕ್ತರು**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560002.
6. **ಶ್ರೀ ಗಜಾನನ ಲಕ್ಷ್ಮೀನಾರಾಯಣ ಭಟ್ಟ**, ಉಮ್ಮಚಗಿ (ಕೋಟೆಮನೆ), ಯಲ್ಲಾಪುರ ತಾ., ಉತ್ತರ ಕನ್ನಡ ಜಿಲ್ಲೆ – 581342
7. **ಡಾ. ಬಿ.ಎಸ್. ಮಹದೇವಯ್ಯ, C/o.** ಡಾ. ಬಿ.ಎಂ. ಯಮುನಾ, ಹರ್ಷಿತಾ ವೆಟರ್ನಿಟಿ ಆಸ್ಪತ್ರೆ, 2ನೇ ಕ್ರಾಸ್, ಅಶೋಕನಗರ, ರಾಣಿಬೆನ್ನೂರು, ಹಾವೇರಿ ಜಿಲ್ಲೆ – 581115.
8. **ವಿದ್ವಾನ್ ಚಂದ್ರಶೇಖರಯ್ಯ**, ಅಧ್ಯಕ್ಷರು, ಕರ್ನಾಟಕ ರಾಜ್ಯ ಸಂಸ್ಕೃತ ಪಾಠಶಾಲಾ ಶಿಕ್ಷಕರ ಸಂಘ (ರಿ.), # 77, 'ಕಲ್ಯಾಣ', ಮಲ್ಲೇಶ್ವರ ಬಡಾವಣೆ, ಐಜೂರು, ರಾಮನಗರ – 571511
9. **ಪ್ರೊ. ಬಿ. ಮಹಾದೇವನ್**, ಡೀನ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐ.ಐ.ಎಂ.), ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560076
10. **ಡಾ. ಪದ್ಮಾಶೇಖರ್**, 'ಪ್ರೀತಿ', ನಂ. 2921, 21ನೇ ಮುಖ್ಯರಸ್ತೆ, 3ನೇ ತಿರುವು (ದಕ್ಷಿಣ), ವಿಜಯನಗರ 2ನೇ ಹಂತ, ಹಿನಕಲ್, ಮೈಸೂರು – 570017.
11. **ಡಾ. ಸಿ. ಪಾಲಯ್ಯ**, ಬಿನ್ ಪೂಜಾರಿ ಚಿನ್ನಯ್ಯ, ಬಚ್ಚಬೋರನಹಟ್ಟಿ, ಗೋಣೂರು ಅಂಚೆ, ಚಿತ್ರದುರ್ಗ ಜಿಲ್ಲೆ – 577517.
12. **ಡಾ. ಭಗವಂತ ಲಕ್ಷ್ಮಣ ನಡೋಣಿ**, ಸಂಸ್ಕೃತ ಪ್ರಾಧ್ಯಾಪಕರು, ಸಂಸ್ಕೃತ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆ ನಗರ, ಧಾರವಾಡ – 580003.
13. **ವಿದ್ವಾನ್ ಶ್ರೀನಿವಾಸಮೂರ್ತಿ**, # 1459, ದಕ್ಷಿಣೇಶ್ವರ ಮಾರ್ಗ, ಎ ಮತ್ತು ಎಫ್ ಬ್ಲಾಕ್, ರಾಮಕೃಷ್ಣನಗರ, ಮೈಸೂರು – 570001.
14. **ಡಾ. ಭಾಷ್ಯಂ ಸ್ವಾಮಿ**, ಪ್ರಾಚಾರ್ಯರು, ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು–570024
15. **ವಿದ್ವಾನ್ ಶ್ರೀಧರಶಾಸ್ತ್ರಿ ಇನಾಂದಾರ್**, ಪ್ರಾಚಾರ್ಯರು, ಸಿ.ಎಲ್.ವೈ. ಸಂಸ್ಕೃತ ಕಾಲೇಜು ಕುಮಾರೇಶ್ವರ ನಗರ, ಬೆಳಗಾವಿ ರಸ್ತೆ ಧಾರವಾಡ – 580 008
16. **ವಿದ್ವಾನ್ ರಾಮಚಂದ್ರ ನಾ. ಭಟ್ಟ, ಪ್ರಾಚಾರ್ಯರು, ಶ್ರೀಮಾತಾ** ಸಂಸ್ಕೃತ ಕಾಲೇಜು, ಉಮ್ಮಚಗಿ, ಯಲ್ಲಾಪುರ ತಾಲ್ಲೂಕು–581347 ಉತ್ತರ ಕನ್ನಡ ಜಿಲ್ಲೆ
17. **ವಿದ್ವಾನ್ ನರಸಿಂಹ ಭಟ್ಟ, ಪ್ರಾಚಾರ್ಯರು, ಶ್ರೀ ರಾಜರಾಜೇಶ್ವರಿ ಸಂಸ್ಕೃತ ಕಾಲೇಜು, ಸೋಂದಾ ಸ್ವರ್ಣವಲ್ಲೀ ಮಠ, ಮಠದೇವಳ ಅಂಚೆ, ಶಿರಸಿ ತಾ॥, ಉತ್ತರ ಕನ್ನಡ ಜಿಲ್ಲೆ**
18. **ಪ್ರೊ. ಶ್ರೀನಿವಾಸ ವರಖೇಡಿ**, ಡೀನ್, ಶಾಸ್ತ್ರ ನಿಕಾಯ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
19. **ಪ್ರೊ. ವಿ. ಗಿರೀಶ್ ಚಂದ್ರ**, ಡೀನ್, ಭಾಷಾ ನಿಕಾಯ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.

**ಪ್ರತಿಗಳು:**

1. ಮಾನ್ಯ ಕುಲಪತಿಗಳ ಆಪ್ತಶಾಖೆ
2. ಕಚೇರಿ ಪ್ರತಿ 3. ರಕ್ಷತಾ ಪ್ರತಿ

ದೂರವಾಣಿ: 080 – 26701303 / 26705387; ಇ-ಮೇಲ್: karnatakasanskrituniversity@gmail.com
दूरवाणी: ०८०–२६७०१३०३ / २६७०५३८७; ई-सन्देश: karnatakasanskrituniversity@gmail.com

ರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्गः, चामराजपेटे, बेङ्गलूरु – ५६००१८.

## ೨೦.೦೧.೨೦೧೪ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ೧೦ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ ೧೦ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜನವರಿ ೨೦, ೨೦೧೪ರ ಸೋಮವಾರ ಬೆಳಿಗ್ಗೆ ೧೧.೦೦ ಗಂಟೆಗೆ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

ಹಾಜರಿದ್ದವರು:

| | | |
|---|---|---|
| ೧. | ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | ಡಾ. ಬಿ.ಎಸ್. ಮಹದೇವಯ್ಯ, ರಾಣಿಬೆನ್ನೂರು | ಸದಸ್ಯರು |
| ೩. | ಡಾ. ಪದ್ಮಾಶೇಖರ್, ಮೈಸೂರು | ಸದಸ್ಯರು |
| ೪. | ಡಾ. ಸಿ. ಪಾಲಯ್ಯ, ಚಿತ್ರದುರ್ಗ | ಸದಸ್ಯರು |
| ೫. | ಡಾ. ಭಗವಂತ ಲಕ್ಷ್ಮಣ ನಡೋಣಿ, ಧಾರವಾಡ | ಸದಸ್ಯರು |
| ೬. | ವಿದ್ವಾನ್ ನರಸಿಂಹ ಭಟ್, ಸೋಂದಾ | ಸದಸ್ಯರು |
| ೭. | ವಿದ್ವಾನ್ ರಾಮಚಂದ್ರ ನಾ. ಭಟ್ಟ, ಉಮ್ಮಚಗಿ | ಸದಸ್ಯರು |
| ೮. | ಪ್ರೊ. ಶ್ರೀನಿವಾಸ ವರಖೇಡಿ, ಡೀನ್, ಶಾಸ್ತ್ರ ನಿಕಾಯ | ಸದಸ್ಯರು |
| ೯. | ಪ್ರೊ. ವಿ. ಗಿರೀಶ್ ಚಂದ್ರ, ಡೀನ್, ಭಾಷಾ ನಿಕಾಯ | ಸದಸ್ಯರು |
| ೧೦. | ಪ್ರೊ. ಪಿ.ಬಿ. ಸಂತಪ್ಪನವರ, ಕುಲಸಚಿವರು | ಸದಸ್ಯ ಕಾರ್ಯದರ್ಶಿ |

ಗೈರುಹಾಜರಿ:

| | | |
|---|---|---|
| ೧. | ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | ವಿದ್ವಾನ್ ಗಜಾನನ ಲಕ್ಷ್ಮೀನಾರಾಯಣ ಭಟ್ಟ, ಉಮ್ಮಚಗಿ | ಸದಸ್ಯರು |
| ೭. | ವಿದ್ವಾನ್ ಚಂದ್ರಶೇಖರಯ್ಯ, ರಾಮನಗರ | ಸದಸ್ಯರು |
| ೮. | ಪ್ರೊ. ಬಿ. ಮಹಾದೇವನ್, ಬೆಂಗಳೂರು | ಸದಸ್ಯರು |
| ೯. | ವಿದ್ವಾನ್ ಶ್ರೀನಿವಾಸಮೂರ್ತಿ, ಮೈಸೂರು | ಸದಸ್ಯರು |
| ೧೦. | ಡಾ. ಭಾಷ್ಯಂಸ್ವಾಮಿ, ಮೈಸೂರು | ಸದಸ್ಯರು |
| ೧೧. | ವಿದ್ವಾನ್ ಶ್ರೀಧರಶಾಸ್ತ್ರಿ ಇನಾಮದಾರ್, ಧಾರವಾಡ | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1: ಪ್ರಶಿಕ್ಷಣ ಪರಿಷತ್ ಒಂಭತ್ತನೇ ಸಭೆಯ ಅನುಪಾಲನಾ ವರದಿ.**

ಟಿಪ್ಪಣಿ: ದಿನಾಂಕ: 07.09.2013ರಂದು ನಡೆದ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ ಒಂಭತ್ತನೆಯ ಸಭೆಯಲ್ಲಿ ಚರ್ಚಿತವಾದ **ವಿಷಯ ಸಂಖ್ಯೆ 9**ಕ್ಕೆ ಸಂಬಂಧಿಸಿದಂತೆ 2013–14ನೇ ಸಾಲಿನ ಶೈಕ್ಷಣಿಕ ಕ್ಯಾಲೆಂಡರ್‌ಅನ್ನು ಅನುಷ್ಠಾನಕ್ಕೆ ತರಲಾಗಿದೆ. **ವಿಷಯ ಸಂಖ್ಯೆ 10**ಕ್ಕೆ ಸಂಬಂಧಿಸಿದಂತೆ ಅನುಮೋದಿತ ಪಟ್ಟಿಯಂತೆ ಎಂ.ಫಿಲ್ ಮತ್ತು ಪಿಎಚ್.ಡಿ. ಪ್ರಬಂಧಗಳ ಪರೀಕ್ಷಕರನ್ನು ಆಯ್ಕೆಮಾಡಿಕೊಳ್ಳಲು ಕ್ರಮವಹಿಸಲಾಗುತ್ತಿದೆ. **ವಿಷಯ ಸಂಖ್ಯೆ 11**ಕ್ಕೆ ಸಂಬಂಧಿಸಿದಂತೆ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ರಾಜ್ಯಮಟ್ಟದ ಸ್ಪರ್ಧೆಗಳನ್ನು 2014ರ ಜನವರಿ 8 ಮತ್ತು 9ರಂದು ಶ್ರೀ ಸಿದ್ಧಲಿಂಗೇಶ್ವರ ವೇದ–ಸಂಸ್ಕೃತ ಕಾಲೇಜು, ತುಮಕೂರು–ಇಲ್ಲಿ ನಡೆಸಲಾಯಿತು. **ವಿಷಯ ಸಂಖ್ಯೆ 12**ಕ್ಕೆ ಸಂಬಂಧಿಸಿದಂತೆ ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿಗಳಿಗಾಗಿ ಹಂತ ಹಂತವಾಗಿ ಜಿಲ್ಲಾವಾರು, ವಲಯವಾರು ಹಾಗೂ ರಾಜ್ಯಮಟ್ಟದ ಸಂಸ್ಕೃತ ಸ್ಪರ್ಧೆಗಳನ್ನು ನಡೆಸಲಾಗಿದೆ. **ವಿಷಯ ಸಂಖ್ಯೆ 13**ಕ್ಕೆ ಸಂಬಂಧಿಸಿದಂತೆ ಕ್ರಮವಹಿಸಲಾಗಿದ್ದು, ಸಮಿತಿಯು ನೀಡಿದ ವರದಿಯನ್ನು ಸಭೆಯ ಮುಂದೆ ಮಂಡಿಸಲು ಕ್ರಮವಹಿಸಲಾಗಿದೆ. **ವಿಷಯ ಸಂಖ್ಯೆ 14**ಕ್ಕೆ ಸಂಬಂಧಿಸಿದಂತೆ 2012–13ನೇ ಸಾಲಿನ ವಾರ್ಷಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ.

ವಿಷಯ ಸಂಖ್ಯೆ 15ಕ್ಕೆ ಸಂಬಂಧಿಸಿದಂತೆ 2014–15ನೇ ಸಾಲಿನಿಂದ ನೂತನ ಪಠ್ಯಕ್ರಮಗಳನ್ನು ಜಾರಿಗೊಳಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿತವಾದ ಇತರೆ ವಿಷಯ ಸಂಖ್ಯೆ 3**ಕ್ಕೆ ಸಂಬಂಧಿಸಿದಂತೆ ಪ್ರಥಮಾ, ಕಾವ್ಯ ಹಾಗೂ ಸಾಹಿತ್ಯ ತರಗತಿಗಳ ವೇಳಾಪಟ್ಟಿಯನ್ನು ಪುನರ್‌ನಿಗದಿಪಡಿಸಲಾಗಿದೆ. **ವಿಷಯ ಸಂಖ್ಯೆ 4**ಕ್ಕೆ ಸಂಬಂಧಿಸಿದಂತೆ ಭಾಷಾಪತ್ರಿಕೆಗಳನ್ನು ಬದಲಾವಣೆ ಮಾಡಿ ಕ್ರಮವಹಿಸಲಾಗಿದೆ. **ವಿಷಯ ಸಂಖ್ಯೆ 5**ಕ್ಕೆ ಸಂಬಂಧಿಸಿದಂತೆ ಕ್ರಮವಹಿಸಲು ಅನುಮತಿಯನ್ನು ಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ.

ನಿರ್ಣಯ: ಸಭೆಯು ಅನುಪಾಲನಾ ವಿವರಗಳನ್ನು ಪರಿಶೀಲಿಸಿ ಅನುಮೋದಿಸಿತು.

**ವಿಷಯ 2: ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ಮಂಡಳಿಗಳ ಸಂಯೋಜಕರಾಗಿ ಸಹಾಯಕ ಪ್ರಾಧ್ಯಾಪಕರ ನಿಯೋಜನೆಗೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.**

ಟಿಪ್ಪಣಿ: 2013–14ನೇ ಸಾಲಿನಲ್ಲಿ ವೇದ, ವೇದಾಂತ, ಶಾಸ್ತ್ರ ಹಾಗೂ ಭಾಷಾ ನಿಕಾಯಗಳ ವಿವಿಧ ವಿಭಾಗಗಳ ಅಧ್ಯಯನ ಮಂಡಳಿಗಳ ನಿರ್ವಹಣೆಯ ದೃಷ್ಟಿಯಿಂದ ವಿಶ್ವವಿದ್ಯಾಲಯಕ್ಕೆ ನೂತನವಾಗಿ ನಿಯುಕ್ತಿಗೊಂಡಿರುವ ಸಹಾಯಕ ಪ್ರಾಧ್ಯಾಪಕರನ್ನು ಅಧ್ಯಯನ ಮಂಡಳಿಗಳ ಸಂಯೋಜಕರನ್ನಾಗಿ ನಿಯೋಜಿಸಲಾಗಿದ್ದು, ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ. ನಿಕಾಯವಾರು ಅಧ್ಯಯನ ಮಂಡಳಿಗಳ ಸಂಯೋಜಕರಾಗಿ ನಿಯೋಜಿತಗೊಂಡ ಸಹಾಯಕ ಪ್ರಾಧ್ಯಾಪಕರ ವಿವರಗಳು ಈ ಕೆಳಕಂಡಂತಿವೆ.

| ಕ್ರ. ಸಂ. | ಸಹಾಯಕ ಪ್ರಾಧ್ಯಾಪಕರು | ವಿಭಾಗ |
|---|---|---|
| | ವೇದ ನಿಕಾಯ | |
| 01 | ಶ್ರೀ ಭಾಸ್ಕರ ಭಟ್ಟ ಜೋಶಿ | ಶುಕ್ಲಯಜುರ್ವೇದ; ಕೃಷ್ಣಯಜುರ್ವೇದ, ಜ್ಯೋತಿಷ್ಯಶಾಸ್ತ್ರ |
| 02 | ಡಾ. ಕೃಷ್ಣ ಜೋಶಿ | ಋಗ್ವೇದ; ಸಾಮವೇದ |
| 03 | ಡಾ. ಶರತ್‌ಚಂದ್ರ ಸ್ವಾಮಿ | ಅಥರ್ವ ವೇದ; ವೀರಶೈವವೇದ |
| | ವೇದಾಂತ ನಿಕಾಯ | |
| 01 | ಡಾ. ವಿನಯ್ ಪಿ. | ದ್ವೈತ; ಅದ್ವೈತ; ವಿಶಿಷ್ಟಾದ್ವೈತ |
| 02 | ಡಾ. ಶರತ್‌ಚಂದ್ರ ಸ್ವಾಮಿ | ಶಕ್ತಿವಿಶಿಷ್ಟಾದ್ವೈತ; ಜೈನಸಿದ್ಧಾಂತ |
| | ಶಾಸ್ತ್ರನಿಕಾಯ | |
| 01 | ಡಾ. ಮಂಜುನಾಥ ಭಟ್ಟ | ಮೀಮಾಂಸಾಶಾಸ್ತ್ರ; ಧರ್ಮಶಾಸ್ತ್ರ |
| 02 | ವಿದುಷೀ ಅನುಪಮಾ ಬಿ. | ಅಲಂಕಾರಶಾಸ್ತ್ರ |
| 03 | ವಿದ್ವಾನ್ ಋಷಿದೇವ್ ಎನ್. ಭಾರ್ಗವ್ | ವ್ಯಾಕರಣಶಾಸ್ತ್ರ |
| 04 | ಶ್ರೀ ಭಾಸ್ಕರ ಭಟ್ಟ ಜೋಶಿ | ನವೀನನ್ಯಾಯ/ಪ್ರಾಚೀನನ್ಯಾಯ |
| | ಭಾಷಾನಿಕಾಯ | |
| 01 | ಶ್ರೀ ಪರಿತೋಷ್ ದಾಸ್ | ಸಾಮಾನ್ಯ ವಿಭಾಗ |
| 02 | ಡಾ. ವಿನಾಯಕ ನಾಮಣ್ಣವರ | ಸಂಸ್ಕೃತ; ಹಸ್ತಪ್ರತಿಶಾಸ್ತ್ರ |
| 03 | ಡಾ. ರೇಖಾದೇವಿ | ಇಂಗ್ಲಿಷ್; ಕನ್ನಡ |

ನಿರ್ಣಯ: ಸಭೆಯು ಘಟನೋತ್ತರ ಅನುಮೋದನೆಗೆ ತನ್ನ ಒಪ್ಪಿಗೆಯನ್ನು ನೀಡಿತು.

**ವಿಷಯ 3: ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ಮಂಡಳಿಗಳಲ್ಲಿ ನಿವೃತ್ತ ವಿದ್ವಾಂಸರನ್ನು ಬಾಹ್ಯ ತಜ್ಞರನ್ನಾಗಿ ನಿಯೋಜಿಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.**

ಟಿಪ್ಪಣಿ: 2013–14ನೇ ಸಾಲಿಗೆ ವೇದ, ವೇದಾಂತ, ಶಾಸ್ತ್ರ ಹಾಗೂ ಭಾಷಾ ನಿಕಾಯಗಳ ವಿವಿಧ ವಿಭಾಗಗಳ ಅಧ್ಯಯನ ಮಂಡಳಿಗಳಿಗೆ ತಜ್ಞವಿದ್ವಾಂಸರ ಕೊರತೆಯಿಂದಾಗಿ ನಿವೃತ್ತ ವಿದ್ವಾಂಸರನ್ನು ಬಾಹ್ಯತಜ್ಞರನ್ನಾಗಿ ನಿಯೋಜಿಸಲಾಗಿದ್ದು, ನಿಯೋಜನೆಗೊಂಡ ವಿದ್ವಾಂಸರ ಪಟ್ಟಿ ಕೆಳಗಿನಂತಿದೆ. ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

| ಕ್ರ. ಸಂ. | ವಿಭಾಗ | ವಿದ್ವಾಂಸರು |
|---|---|---|
| 01 | ಋಗ್ವೇದ | ವಿದ್ವಾನ್ ಆರ್.ಎಸ್. ಜನಾರ್ದನ್ |
| | | ವಿದ್ವಾನ್ ಕಳಸೇಶ್ವರ ಭಟ್ಟ |
| 02 | ಅಥರ್ವವೇದ | ವಿದ್ವಾನ್ ಶ್ರೀಧರ ಅಡಿ |
| 03 | ವೀರಶೈವವೇದ | ಡಾ. ಎಂ. ಶಿವಕುಮಾರಸ್ವಾಮಿ |
| | | ವಿದ್ವಾನ್ ಎಂ. ರಾಜಶೇಖರಯ್ಯ |

ನಿರ್ಣಯ: ಸಭೆಯು ಘಟನೋತ್ತರ ಅನುಮೋದನೆಗೆ ತನ್ನ ಒಪ್ಪಿಗೆಯನ್ನು ನೀಡಿತು.

**ವಿಷಯ 4: ಡಿ.ಲಿಟ್ (ವಿದ್ಯಾವಾಚಸ್ಪತಿ) ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವ ಬಗೆಗೆ.**

ಟಿಪ್ಪಣಿ: ವಿಶ್ವವಿದ್ಯಾಲಯವು ಡಿ.ಲಿಟ್ (ವಿದ್ಯಾವಾಚಸ್ಪತಿ) ಪದವಿಗಾಗಿ ಅರ್ಜಿಗಳನ್ನು ಆಹ್ವಾನಿಸಿ ದಿನಾಂಕ 16.09.2013ರಂದು ಅಧಿಸೂಚನೆಯನ್ನು ಹೊರಡಿಸಿತ್ತು. ಈ ಅಧಿಸೂಚನೆಯನ್ವಯ ಈ ಕೆಳಕಂಡ ಆರು ಜನ ವಿದ್ವಾಂಸರು ವಿವಿಧ ನಿಕಾಯಗಳಿಗೆ ಪ್ರಸ್ತಾವನೆಗಳನ್ನು ಸಲ್ಲಿಸಿದ್ದು, ಡೀನ್‌ರ ಅಭಿಪ್ರಾಯದೊಂದಿಗೆ ಮಂಡಿಸಲಾಗಿದೆ.

**ವೇದ ನಿಕಾಯ:** ಡಾ. ವಿ. ವೆಂಕಟರಮಣ ಭಟ್; 'ಸಾಮಶಿಕ್ಷಾ ಭಾರತೀ'

**ಭಾಷಾ ನಿಕಾಯ:**

1. ಡಾ. ವಿರೂಪಾಕ್ಷ ಜಡ್ಡಿಪಾಲ್; 'ಸಂಸ್ಕೃತಸುಭಾಷಿತೇಷು ನಿರ್ವಹಣಶಾಸ್ತ್ರಚಿಂತನಸಮುನ್ಮೇಷಸ್ಯ ವಿಶ್ಲೇಷಣಾತ್ಮಕಂ ಪರಿಶೀಲನಮ್'
2. ಪ್ರೊ. ಸಿ. ನಂಜುಂಡಯ್ಯ; 'ಬಾಣಭಟ್ಟಸ್ಯ ಕಾದಂಬರ್ಯಾಃ ಸಾಂಸ್ಕೃತಿಕಮ್ ಅಧ್ಯಯನಮ್'

**ಶಾಸ್ತ್ರ ನಿಕಾಯ:** ವಿದ್ವಾನ್ ಉಡುಪಿ ರಾಮನಾಥಾಚಾರ್ಯ; 'ಪರಿವಾರಸಮೇತಾನಾಂ ಕುಲಾಷ್ಟಕಮಹಾನಾಗಾನಾಂ ಜಪ–ಧ್ಯಾನ–ಹುತಾರ್ಚಾ–ಚಿಂತನ–ಸಂಸ್ಕಾರ–ಶಾಂತೀತರಾಷ್ಟವಿಧಕರ್ಮಾಣಾಂ–ವೇದ–ವೇದಾಂಗ–ಸ್ಮೃತೀತಿಹಾಸ–ಪುರಾಣ–ಸಂಹಿತಾ–ತಂತ್ರಾಗಮೋಕ್ತದಿಶಾ ಸಮೀಕ್ಷಾ'

**ವೇದಾಂತ ನಿಕಾಯ:**

1. ಪ್ರೊ. ಆರ್. ಸತ್ಯನಾರಾಯಣನ್; 'ದ್ವೈತಶಾಸ್ತ್ರೇ ಅಭಿನವಾನ್ಯಥಾಖ್ಯಾತಿವಾದಃ'
2. ಡಾ. ವಿನಾಯಕ ಭಟ್; 'ಉಪನಿಷದಿ ಸಾಮಾಜಿಕಸ್ವಾಸ್ಥ್ಯಮ್–ಏಕಮಧ್ಯಯನಮ್'

ಮುಂದಿನ ಕ್ರಮವಹಿಸಲು ಅನುಮತಿಯನ್ನು ಕೋರಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ನಿಕಾಯಗಳಿಗೆ ನಿಯಮಾನುಸಾರ ಸಲ್ಲಿಸಿರುವ ಡಿ.ಲಿಟ್ ಪ್ರಬಂಧದ ಪ್ರಸ್ತಾವನೆಗಳ ವಿಷಯಗಳನ್ನು ನಿಕಾಯದ ಡೀನರು ಸಭೆಯ ಮುಂದೆ ಮಂಡಿಸಿದರು. ಸಭೆ ಚರ್ಚಿಸಿ ಪರಿಶೀಲಿಸಿತು. ಯುಜಿಸಿ ಮತ್ತು ಡಿ.ಲಿಟ್ ಪರಿನಿಯಮಗಳನ್ವಯ ಕ್ರಮಬದ್ಧವಾಗಿ ಮುಂದುವರಿಸಲು ಸಭೆಯು ತನ್ನ ಒಪ್ಪಿಗೆಯನ್ನು ನೀಡಿತು.**

**ವಿಷಯ 5: 'ಸಂಶೋಧನ ಕೇಂದ್ರ ಮಾನ್ಯತಾ ಪರಿಶೀಲನಾ ಸಮಿತಿ'ಯನ್ನು ಪುನಾರಚಿಸುವ ಬಗೆಗೆ.**

ಟಿಪ್ಪಣಿ: ವಿಶ್ವವಿದ್ಯಾಲಯವು ಸಂಸ್ಕೃತ ಸಂಶೋಧನ ಕೇಂದ್ರಗಳಿಗೆ ಮಾನ್ಯತೆಯನ್ನು ನೀಡಲು ಈ ಹಿಂದೆ ರಚಿಸಿದ್ದ ಸಂಶೋಧನ ಕೇಂದ್ರ ಮಾನ್ಯತಾ ಪರಿಶೀಲನಾ ಸಮಿತಿಯ ಅವಧಿಯು ಮುಕ್ತಾಯಗೊಂಡಿದೆ. ಕೆಲವು ಸಂಶೋಧನ ಕೇಂದ್ರಗಳು ಮಾನ್ಯತೆಯನ್ನು ನೀಡುವಂತೆ ಕೋರಿ ಪ್ರಸ್ತಾವನೆಗಳನ್ನು ಸಲ್ಲಿಸಿವೆ. ಈ ಸಂಬಂಧ ಪರಿಶೀಲಿಸಲು ಸಮಿತಿಯನ್ನು ಪುನಾರಚಿಸುವ ಅಗತ್ಯವಿದ್ದು, ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು 'ಸಂಶೋಧನ ಕೇಂದ್ರಗಳ ಮಾನ್ಯತಾ ಪರಿನಿಯಮ–೨೦೧೨' ಅನ್ವಯ ಮೂರು ಜನ ಬಾಹ್ಯತಜ್ಞರು, ಪ್ರಶಾಸನ ಸಮಿತಿಯ ಒಬ್ಬ ಸದಸ್ಯರು, ಪ್ರಶಿಕ್ಷಣ ಪರಿಷತ್ತಿನ ಒಬ್ಬ ಸದಸ್ಯರು, ಕುಲಪತಿಗಳಿಂದ ನಾಮನಿರ್ದೇಶನಗೊಂಡ ಒಬ್ಬ ಸದಸ್ಯರು, ಒಟ್ಟು ಆರು ಜನ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲು ಒಪ್ಪಿಗೆ ನೀಡಿತು. ಬಾಹ್ಯತಜ್ಞರಲ್ಲಿ ಈ ಕೆಳಕಂಡವರನ್ನು ಕುಲಪತಿಗಳು ಆಯ್ಕೆ ಮಾಡಿಕೊಳ್ಳಲು ಸೂಚಿಸಿತು.**

**ಪ್ರೊ. ಬಿ.ಎ. ದೊಡ್ಡಮನಿ, ಮೈಸೂರು ವಿಶ್ವವಿದ್ಯಾನಿಲಯ; ಪ್ರೊ. ಎಂ.ಎನ್. ಜೋಶಿ, ಕರ್ನಾಟಕ ವಿಶ್ವವಿದ್ಯಾಲಯ; ಡಾ. ಮೈಖೆಲ್, ಗುಲಬರ್ಗಾ ವಿಶ್ವವಿದ್ಯಾಲಯ; ಡಾ. ಶಿವರಾಜ್, ಬೆಂಗಳೂರು ವಿಶ್ವವಿದ್ಯಾಲಯ; ಡಾ. ಕೆ. ವೀರಭದ್ರಸ್ವಾಮಿ, ಮೈಸೂರು ವಿಶ್ವವಿದ್ಯಾನಿಲಯ; ಪ್ರೊ. ಬಿ. ನಾಗರಾಜು, ಸಂಸ್ಕೃತ ಸ್ನಾತಕೋತ್ತರ ಕೇಂದ್ರ, ಕಟೀಲು; ಡಾ. ಜಿ.ಎನ್. ಭಟ್ ನಡಗೋಡು, ಎಂ.ಎಂ. ಕಲಾ ಮತ್ತು ವಿಜ್ಞಾನ ಕಾಲೇಜು, ಶಿರಸಿ, ಉತ್ತರ ಕನ್ನಡ; ಡಾ. ಶ್ರೀಧರ ಭಟ್, ಧರ್ಮಸ್ಥಳ ಶ್ರೀ ಮಂಜುನಾಥೇಶ್ವರ ಪದವಿ ಕಾಲೇಜು, ಉಜಿರೆ; ಡಾ. ಲಕ್ಷ್ಮೀನಾರಾಯಣ ಭಟ್, ಮಂಗಳೂರು ವಿಶ್ವವಿದ್ಯಾಲಯದ ಘಟಕ ಕಾಲೇಜು, ಮಂಗಳೂರು; ಡಾ. ವೈ.ಸಿ. ನಂಜುಂಡಯ್ಯ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ; ಡಾ. ಎಸ್. ಶಿವರಾಜಪ್ಪ, ಮಹಾರಾಜ ಕಾಲೇಜು, ಮೈಸೂರು; ಡಾ. ರೂಪಾ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ.**

**ವಿಷಯ 6: ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರನ್ನು ಎಂ.ಫಿಲ್ (ವಿಶಿಷ್ಟಾಚಾರ್ಯ) ಪದವಿಯ ಪ್ರಬಂಧ ಮಾರ್ಗದರ್ಶಕರಾಗಿ ಪರಿಗಣಿಸಲು ಅನುಮೋದನೆ ನೀಡುವ ಬಗೆಗೆ.**

ಟಿಪ್ಪಣಿ: 2012–13ನೇ ಸಾಲಿನಿಂದ ಪ್ರಾರಂಭಿಸಲಾಗಿರುವ ಎಂ.ಫಿಲ್ (ವಿಶಿಷ್ಟಾಚಾರ್ಯ) ಪದವಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಪ್ರಬಂಧ ಮಾರ್ಗದರ್ಶಕರಾಗಿ ವಿಶ್ವವಿದ್ಯಾಲಯದ ಈ ಕೆಳಕಂಡ ಸಹಾಯಕ ಪ್ರಾಧ್ಯಾಪಕರನ್ನು ಪರಿಗಣಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. ಈಗಾಗಲೇ ಈ ಐವರು ಡಾಕ್ಟರೇಟ್ ಪದವಿ ಪಡೆದಿದ್ದು, ನಿಯಮಾನುಸಾರ ಅವರಿಗೆ 3 ವರ್ಷಗಳ ಬೋಧನ/ಸಂಶೋಧನ ಅನುಭವವೂ ಇದೆ. ಹೀಗಾಗಿ ಇವರಿಗೆ ಮಾರ್ಗದರ್ಶಕತ್ವ ನೀಡಬಹುದಾಗಿದೆ.

1. ಡಾ. ಶರತ್‌ಚಂದ್ರಸ್ವಾಮಿ

2. ಡಾ. ವಿನಯ್ ಪಿ.
3. ಡಾ. ವಿನಾಯಕ ನಾಮಣ್ಣವರ
4. ಡಾ. ಮಂಜುನಾಥ ಭಟ್ಟ
5. ಡಾ. ಕೃಷ್ಣ ಜೋಶಿ

ನಿರ್ಣಯ: ಸಭೆಯು ವಿವರಗಳನ್ನು ಗಮನಿಸಿ ಅಧ್ಯಯನಾಂಗದ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಉಪಸಮಿತಿಯೊಂದನ್ನು ರಚಿಸಿತು. ಈ ಸಮಿತಿಯು ಸಭೆ ಸೇರಿ ಯುಜಿಸಿ ನಿಯಮಗಳನ್ವಯ ಮತ್ತು ಕಾಲಕಾಲಕ್ಕೆ ಹೊರಡಿಸಿದ ಸರ್ಕಾರಿ ಆದೇಶಗಳನ್ವಯ ಎಂ.ಫಿಲ್. ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಪರಿಗಣಿಸಲು ಸ್ಪಷ್ಟ ವರದಿಯೊಂದನ್ನು ನೀಡಲು ಸೂಚಿಸಿತು.

**ಉಪಸಮಿತಿ**

| | |
|---|---|
| ನಿರ್ದೇಶಕರು, ಅಧ್ಯಯನಾಂಗ | ಅಧ್ಯಕ್ಷರು |
| ಪಂ. ಜಯತೀರ್ಥಾಚಾರ್ಯ ಮಳಗಿ, ಸದಸ್ಯರು, ಪ್ರಶಾಸನ ಸಮಿತಿ | ಸದಸ್ಯರು |
| ಪ್ರೊ. ಬಿ.ಎಸ್. ಮಹಾದೇವಯ್ಯ, ಸದಸ್ಯರು, ಪ್ರಶಿಕ್ಷಣ ಪರಿಷತ್ತು | ಸದಸ್ಯರು |
| ಡಾ. ಶಿವರಾಜ್, ಬಾಹ್ಯತಜ್ಞ | ಸದಸ್ಯರು |
| ಪ್ರೊ. ವಿ. ಗಿರೀಶ್‌ಚಂದ್ರ, ಡೀನ್, ಭಾಷಾನಿಕಾಯ | ಸದಸ್ಯರು |

**ವಿಷಯ 7: ಬಿ.ಎ. ಸಂಸ್ಕೃತ ವಿದ್ವನ್ಮಧ್ಯಮಾ ಹಾಗೂ ಎಂ.ಎ. ಸಂಸ್ಕೃತ ವಿದ್ವದುತ್ತಮಾ ಪದವಿಯನ್ನು ಖಾಸಗಿಯಾಗಿ ಅಧ್ಯಯನ ಮಾಡುವ ವಿದ್ಯಾರ್ಥಿಗಳ ಅರ್ಹತೆಯನ್ನು ನಿರ್ದಿಷ್ಟಪಡಿಸುವ ಬಗೆಗೆ.**

ಟಿಪ್ಪಣಿ: ಸಂಸ್ಕೃತಾಧ್ಯಯನವನ್ನು ಕೈಗೊಳ್ಳುವಂತೆ ಉತ್ತೇಜನ ನೀಡುವ ದೃಷ್ಟಿಯಿಂದ ಬಿ.ಎ. ಸಂಸ್ಕೃತ ವಿದ್ವನ್ಮಧ್ಯಮಾ ಪದವಿಯನ್ನು ಖಾಸಗಿಯಾಗಿ ಅಧ್ಯಯನ ಮಾಡುವ ವಿದ್ಯಾರ್ಥಿಗಳ ಅರ್ಹತೆಯನ್ನು ಈ ಕೆಳಕಂಡಂತೆ ನಿರ್ದಿಷ್ಟಪಡಿಸಬಹುದಾಗಿದೆ:

1. ಪಿ.ಯು.ಸಿ ಪದವಿ ಪಡೆಯದ ವಿದ್ಯಾರ್ಥಿಗಳಿಗೂ ಕೂಡ ಅನುಕೂಲವಾಗುವಂತೆ, ಬೇರೆ ವಿಶ್ವವಿದ್ಯಾಲಯಗಳಿಂದ ಮಾನ್ಯತೆ ಪಡೆದ ಬಿ.ಎ. ಅಥವಾ ಯಾವುದಾದರೂ ಇತರೆ ಪದವಿ ಪಡೆದವರಿಗೆ ಪ್ರವೇಶ ಪರೀಕ್ಷೆಯ ಮೂಲಕ ಅಥವಾ ಸರ್ಟಿಫಿಕೇಟ್ ಕೋರ್ಸ್‌ನ ಮೂಲಕ ಪ್ರವೇಶ ನೀಡಬಹುದಾಗಿದೆ.
2. ಖಾಸಗಿ ಅಭ್ಯರ್ಥಿಗಳಿಗೆ 10 ದಿನಗಳ ಸಂಪರ್ಕ ತರಗತಿಗಳನ್ನು ನಡೆಸಬಹುದಾಗಿದೆ.

ನಿರ್ಣಯ: ಸಭೆಯು ಮೇಲ್ಕಂಡ ವಿವರಗಳನ್ನು ಪರಿಶೀಲಿಸಿತು. ಪಿಯುಸಿ ಉತ್ತೀರ್ಣರಾಗಿದ್ದು, ಈಗಾಗಲೇ ಶೃಂಗೇರಿ ಸುರಸರಸ್ವತೀ ಸಭಾ, ಭಾರತೀಯ ವಿದ್ಯಾಭವನ ನಡೆಸುವ ಸಂಸ್ಕೃತ ಪರೀಕ್ಷೆಗಳು ಹಾಗೂ ಸಂಸ್ಕೃತ ಭಾರತೀ ನಡೆಸುವ ಪರೀಕ್ಷೆಗಳಲ್ಲಿ ಉತ್ತೀರ್ಣತೆ ಪಡೆದಿರುವವರು ಬಿ.ಎ. ಸಂಸ್ಕೃತ ವಿದ್ವನ್ಮಧ್ಯಮಾ ಪದವಿಗೆ ಪ್ರವೇಶ ಪಡೆಯಲು ಅರ್ಹರೆಂದು ಸಭೆಯು ನಿರ್ಣಯಿಸಿತು. ಅಂತೆಯೇ ಯಾವುದೇ ಪದವಿಯನ್ನು ಪಡೆದ ಪದವೀಧರರು ಸಂಸ್ಕೃತದಲ್ಲಿ ಡಿಪ್ಲೊಮಾ/ತತ್ಸಮಾನ ಪರೀಕ್ಷೆಯನ್ನು ಉತ್ತೀರ್ಣರಾಗಿದ್ದಲ್ಲಿ ಎಂ.ಎ. ಸಂಸ್ಕೃತ ವಿದ್ವದುತ್ತಮಾ ಪದವಿಗೆ ಅರ್ಹರಾಗಿರುತ್ತಾರೆ. ಆದರೆ, ಇವರು ವಿಶ್ವವಿದ್ಯಾಲಯ ನಡೆಸುವ ಪ್ರವೇಶ ಪರೀಕ್ಷೆಗೆ ಒಳಪಟ್ಟು ಪದವಿಗೆ ಅರ್ಹತೆ ಪಡೆಯುವುದು ಅವಶ್ಯವೆಂದು ಸಭೆಯು ಅಭಿಪ್ರಾಯಪಟ್ಟಿತು.

**ವಿಷಯ 8: ಬಿ.ಎ. ಸಂಸ್ಕೃತ/ವೇದ ವಿದ್ವನ್ಮಧ್ಯಮಾ ಹಾಗೂ ಎಂ.ಎ. ಸಂಸ್ಕೃತ/ವೇದ ವಿದ್ವದುತ್ತಮಾ ಪದವಿಯ ಪ್ರವೇಶಕ್ಕಾಗಿ ಸರ್ಟಿಫಿಕೇಟ್/ಡಿಪ್ಲೊಮಾ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡುವ ಬಗೆಗೆ.**

ಟಿಪ್ಪಣಿ: ಪದವಿಪೂರ್ವ ಶಿಕ್ಷಣದಲ್ಲಿ ಸಂಸ್ಕೃತವನ್ನು ಭಾಷೆಯಾಗಿ ಅಧ್ಯಯನ ಮಾಡಿರದ ಹಾಗೂ ಬಿ.ಎ. ಪದವಿಗೆ ಪ್ರವೇಶ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳಿಗಾಗಿ ಪೂರಕ ಶಿಕ್ಷಣವನ್ನು ಒದಗಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯವು ಹೊಸದಾಗಿ ಸರ್ಟಿಫಿಕೇಟ್/ಡಿಪ್ಲೊಮಾ ಕೋರ್ಸ್‌ಗಳನ್ನು 2014–15ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಬಹುದಾಗಿದ್ದು, ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ.

ಇತರ ವಿಶ್ವವಿದ್ಯಾಲಯಗಳಲ್ಲಿ ಪದವಿಯನ್ನು ಅಧ್ಯಯನ ಮಾಡಿರುವ, ಆದರೆ ಸಂಸ್ಕೃತ ಭಾಷೆಯನ್ನು ವ್ಯಾಸಂಗ ಮಾಡಿರದ ವಿದ್ಯಾರ್ಥಿಗಳು ಎಂ.ಎ. ವಿದ್ವದುತ್ತಮಾ ಪದವಿಗೆ ಪ್ರವೇಶ ಪಡೆಯಲು ಇಚ್ಛಿಸಿದರೆ, ಅಂತಹ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತೆ ಶಾಸ್ತ್ರವಾರು ಡಿಪ್ಲೊಮಾ ಕೋರ್ಸ್‌ಗಳನ್ನು ಪ್ರಾರಂಭಿಸಬಹುದಾಗಿದ್ದು, ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: ಸಭೆಯು ೨೦೧೪–೧೫ನೇ ಸಾಲಿನಿಂದ ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸಲು ಒಪ್ಪಿಗೆಯನ್ನು ನೀಡಿತು. ಈ ಸಂಬಂಧವಾಗಿ ಪಠ್ಯಕ್ರಮ ಹಾಗೂ ಕೋರ್ಸಿನ ವಿವರಗಳನ್ನು ಸಿದ್ಧಪಡಿಸಿ ಮುಂದಿನ ಸಭೆಯಲ್ಲಿ ಮಂಡಿಸಲು ಸೂಚಿಸಿತು.

**ವಿಷಯ 9: ಜ್ಯೋತಿಷ್ಯಶಾಸ್ತ್ರದ ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಬಗೆಗೆ.**

ಟಿಪ್ಪಣಿ: ವಿಶ್ವವಿದ್ಯಾಲಯವು ಜ್ಯೋತಿಷ್ಯಶಾಸ್ತ್ರದ ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್ ಪ್ರಾರಂಭಿಸಲು ಅನುಮತಿ ಕೋರಿ, ವಿನಿಯಮವನ್ನು ರೂಪಿಸಿ ಸರ್ಕಾರಕ್ಕೆ ಸಲ್ಲಿಸಿತ್ತು. ಈ ವಿನಿಯಮವನ್ನು ಘನತೆವೆತ್ತ ರಾಜ್ಯಪಾಲರು ದಿನಾಂಕ: 30.08.2013ರಂದು ಅಂಕಿತಗೊಳಿಸಿರುತ್ತಾರೆ. ಸರ್ಕಾರಿ ಆದೇಶ ಸಂಖ್ಯೆ: ಇಡಿ 2 ಯುಡಿಎಸ್ 2013; ದಿನಾಂಕ:

26.12.2013 ಅನುಸಾರ ಈ ವಿನಿಯಮವು ಜಾರಿಗೆ ಬಂದಿದ್ದು, ವಿಶ್ವವಿದ್ಯಾಲಯವು ಜ್ಯೋತಿಷ್ಯಶಾಸ್ತ್ರದ ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸಬೇಕಾಗಿದೆ. ಈ ಬಗೆಗೆ ಮುಂದಿನ ಕ್ರಮವಹಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ೨೦೧೪-೧೫ನೇ ಸಾಲಿನಿಂದ ಜ್ಯೋತಿಷ್ಯಶಾಸ್ತ್ರ ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸಲು ತನ್ನ ಒಪ್ಪಿಗೆಯನ್ನು ನೀಡಿತು. ಈ ಸಂಬಂಧವಾಗಿ ಅಧ್ಯಯನ ಮಂಡಳಿಯೊಂದನ್ನು ರಚಿಸಲು ಹಾಗೂ ರಾಜ್ಯಪಾಲರಿಂದ ಅಂಕಿತಗೊಂಡ ಪರಿನಿಯಮಗಳನುಸಾರ ಕ್ರಮವಹಿಸಲು ಸಭೆಯು ಸೂಚಿಸಿತು.**

**ವಿಷಯ 10: ಅಂತಃಶಾಸ್ತ್ರೀಯ ಅಧ್ಯಯನವನ್ನು ಉತ್ತೇಜಿಸುವ ಸಲುವಾಗಿ ಸಂಸ್ಕೃತ ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಬಗೆಗೆ.**

ಟಿಪ್ಪಣಿ: ಅಂತಃಶಾಸ್ತ್ರೀಯ ಅಧ್ಯಯನವನ್ನು ಉತ್ತೇಜಿಸುವ ಸಲುವಾಗಿ ಸಂಸ್ಕೃತ ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸುವುದು ಅತ್ಯಂತ ಉಚಿತವಾಗಿದೆ. 2014-15ನೇ ಸಾಲಿನಿಂದ ಈ ಕೋರ್ಸ್‌ಗಳನ್ನು ಆರಂಭಿಸುವ ಬಗೆಗೆ ಕ್ರಮವಹಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಆಯಾಯ ನಿಕಾಯಗಳಿಗೆ ಸಂಬಂಧಿಸಿದಂತೆ ಡೀನರು ಅಧ್ಯಯನ ಮಂಡಳಿಯನ್ನು ರಚಿಸಿ, ವಿವಿಧ ಬಗೆಯ ಕೋರ್ಸ್‌ಗಳನ್ನು ಸಿದ್ಧಪಡಿಸಿ ಮುಂದಿನ ಸಭೆಯಲ್ಲಿ ಮಂಡಿಸಲು ಸೂಚಿಸಿತು.**

**ವಿಷಯ 11: ವಿಶ್ವವಿದ್ಯಾಲಯವು ಯು.ಜಿ.ಸಿ. ನೆಟ್ ತರಬೇತಿ ಕೇಂದ್ರವನ್ನು ಪ್ರಾರಂಭಿಸಲು ಅನುಮತಿ ನೀಡುವ ಬಗೆಗೆ.**

ಟಿಪ್ಪಣಿ: ವಿಶ್ವವಿದ್ಯಾಲಯ ಅನುದಾನ ಆಯೋಗ(ಯು.ಜಿ.ಸಿ)ವು ನಡೆಸುವ ನೆಟ್(ಎನ್.ಇ.ಟಿ) ಪರೀಕ್ಷೆಯು ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಅತ್ಯಂತ ಉಪಯುಕ್ತವಾದುದಾಗಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ದಿನಾಂಕ: 16.12.2013ರಿಂದ 24.12.2013ರ ವರೆಗೆ ನೆಟ್ ತರಬೇತಿ ಕಾರ್ಯಾಗಾರವನ್ನು ಆಯೋಜಿಸಿತ್ತು. ಈ ಕಾರ್ಯಾಗಾರಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು ನೆಟ್ ಪರೀಕ್ಷಾ ತರಬೇತಿ ಕೇಂದ್ರವನ್ನು ಪ್ರಾರಂಭಿಸುವುದು ಅತ್ಯಂತ ಸೂಕ್ತವಾಗಿದೆ. ಈ ಕೇಂದ್ರದ ಮುಖಾಂತರ ಸುಮಾರು 60 ದಿನಗಳ ಕಾಲ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಬಗೆಗೆ ಸೂಕ್ತ ತರಬೇತಿಯನ್ನು ನೀಡಬಹುದಾಗಿದೆ. ಈ ಕಾರ್ಯವನ್ನು ವಿಶ್ವವಿದ್ಯಾಲಯಕ್ಕೆ ನಿಯುಕ್ತಿಗೊಂಡಿರುವ ಅಧ್ಯಾಪಕರೇ ನಿರ್ವಹಿಸಬಹುದಾಗಿದ್ದು, ತರಬೇತಿ ಕೇಂದ್ರವನ್ನು ಪ್ರಾರಂಭಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ನೆಟ್ ಪರೀಕ್ಷಾ ತರಬೇತಿ ಕೇಂದ್ರವನ್ನು ಪ್ರಾರಂಭಿಸಲು ಅನುಮೋದನೆ ನೀಡಿತು. ಅಧ್ಯಯನಾಂಗದ ನಿರ್ದೇಶಕರು ಈ ತರಬೇತಿ ಕೇಂದ್ರದ ನಿರ್ವಾಹಕರಾಗಿ ಕಾರ್ಯನಿರ್ವಹಿಸಲು ಸಭೆಯು ಸೂಚಿಸಿತು.**

**ವಿಷಯ 12: ವಿಶ್ವವಿದ್ಯಾಲಯದ ಸಿಬ್ಬಂದಿಯ ರಜೆಯನ್ನು ನಿರ್ಧರಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ಬೋಧಕ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಇತರೆ ವಿಶ್ವವಿದ್ಯಾಲಯಗಳಲ್ಲಿ ಇರುವಂತೆ ಬೇಸಗೆ ರಜೆಯ ಸೌಲಭ್ಯವನ್ನು ಬೋಧಕ ಸಿಬ್ಬಂದಿಗಳಿಗೆ ನೀಡಬೇಕಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಯುಜಿಸಿ ನಿಯಮಗಳನ್ವಯ ಸಿದ್ಧಗೊಂಡಿರುವ ರಜೆಯ ಸೌಲಭ್ಯವನ್ನು ಕಾರ್ಯರೂಪಕ್ಕೆ ತರಲು ಒಪ್ಪಿಗೆ ನೀಡಿತು. ೨೦೧೩-೧೪ರಲ್ಲಿ ಬೋಧಕ ಸಿಬ್ಬಂದಿಗಳು ಬೇಸಿಗೆ ರಜೆ ಪಡೆಯಲು ಇಚ್ಛಿಸಿರುವುದನ್ನು ಪರಿಶೀಲಿಸಿದ ಸಭೆಯು, ಈ ವರ್ಷ ವಿಶ್ವವಿದ್ಯಾಲಯದ ಹಲವಾರು ಯೋಜನೆಗಳು ಮತ್ತು ಪ್ರಕಲ್ಪಗಳು ಕಾರ್ಯರೂಪದಲ್ಲಿರುವುದರಿಂದ ಅಧ್ಯಕ್ಷರ ನಿರ್ಣಯದಂತೆ ರಜೆ ನೀಡಲು ಸಾಧ್ಯವಿಲ್ಲವೆಂದು ಸೂಚಿಸಿತು. ಬೇಸಿಗೆ ರಜೆಯಲ್ಲಿ ಕಾರ್ಯನಿರ್ವಹಿಸುವ ಬೋಧಕ ಸಿಬ್ಬಂದಿಗಳಿಗೆ ನಿಯಮಾನುಸಾರ ಗಳಿಕೆರಜೆ ನೀಡಲು ಅನುಮೋದಿಸಿತು.**

| ರಜೆಯ ಸ್ವರೂಪ | ರಜೆ ಸಂಖ್ಯೆ (ವರ್ಷಕ್ಕೆ) | ವಿವರಗಳು* | ರಜೆ ದಯಪಾಲಿಸುವ ಅಧಿಕಾರಿ |
|---|---|---|---|
| ಸಾಂದರ್ಭಿಕ ರಜೆ (Casual Leave) | 15 ದಿನಗಳು | ಮಧ್ಯ ಬರುವ ರಜೆಗಳನ್ನು ಪರಿಗಣಿಸಲಾಗುವುದಿಲ್ಲ | ನಿಕಾಯದ ಮುಖ್ಯಸ್ಥರು |
| ವಿಶೇಷ ರಜೆ (ಆಡಳಿತಾತ್ಮಕ) (Special Leave) | 15 ದಿನಗಳು ಪ್ರದಾನ ಅಧಿಕಾರಿಗಳ ನಿರ್ಧಾರದಂತೆ | ಪರೀಕ್ಷೆ/ತಪಾಸಣೆ/ಮಂಡಳಿ: ಇತ್ಯಾದಿ ಕಾರಣಗಳಿಗೆ: ಪ್ರಯಾಣ ಅವಧಿ ಬಿಟ್ಟು: ಸಂತಾನಹರಣ ಶಸ್ತ್ರಚಿಕಿತ್ಸೆ 6-14/ ಕೂಡಿಕೆಯಾಗುವುದಿಲ್ಲ: ಮಿಶ್ರವಾಗುವುದಿಲ್ಲ: ಸಾರ್ವತ್ರಿಕ ರಜೆ ಹೊರತುಪಡಿಸಿ | ನಿಕಾಯದ ಮುಖ್ಯಸ್ಥರು |
| ಕರ್ತವ್ಯ ರಜೆ (ಶೈಕ್ಷಣಿಕ) (Duty Leave) | ಅವಧಿರಹಿತ, ಕರ್ತವ್ಯವೆಂದು ಪರಿಗಣಿಸಲಾಗುತ್ತದೆ (15 ದಿನಗಳು + ಅವಶ್ಯಕತೆಗೆ ಅನುಗುಣವಾಗಿ) | ಕಾರ್ಯಾಗಾರ/ಸಮ್ಮೇಳನ/ವಿಚಾರಸಂಕಿರಣ/ನಿಯೋಜನೆ/ವಿಶ್ವವಿದ್ಯಾಲಯ ಕಾರ್ಯ/ ಅನ್ಯ ವಿಶ್ವವಿದ್ಯಾಲಯ ಕಾರ್ಯ, ಮಿಶ್ರವಾಗಬಹುದು. ಸರ್ಕಾರಿ ಹಾಗೂ ಸರ್ಕಾರೇತರ ಸಂಘ-ಸಂಸ್ಥೆಗಳಲ್ಲಿ ಜ್ಞಾನದ ವಿನಿಮಯಕ್ಕಾಗಿ | ನಿಕಾಯದ ಮುಖ್ಯಸ್ಥರು (2 ಗಳವರೆಗೆ)/ ಕುಲಸಚಿವರು+ಕುಲಪತಿಗಳು (ಹೆಚ್ಚಿನದಕ್ಕೆ) |
| ಗಳಿಕೆ ರಜೆ (Earned Leave) | 30/10 ದಿನಗಳು (1/30 + 1/3) | ಬೇಸಿಗೆ ರಜೆ ರಹಿತ ಸಿಬ್ಬಂದಿಗೆ ವರ್ಷದಲ್ಲಿ 30 ಮತ್ತು ಬೇಸಿಗೆ ರಜೆಸಹಿತ ಸಿಬ್ಬಂದಿಗೆ ವರ್ಷದಲ್ಲಿ 10. ಬೇಸಿಗೆ ರಜೆ ಸಹಿತ ಸಿಬ್ಬಂದಿ ಒಂದುವೇಳೆ ಬೇಸಿಗೆ ರಜೆಯ ಅವಧಿಯಲ್ಲಿ ಕಾರ್ಯನಿರತರಾದಲ್ಲಿ ಆ ವರ್ಷ 30 ಪ್ರಸ್ತುತ ರಜೆಯನ್ನು ನೀಡಲಾಗುವುದು. 300ರ ವರೆಗೂ ಕೂಡಿಕೆಯಾಗುವುದು. ಒಟ್ಟಿಗೆ 60 ರಜೆಗಳನ್ನು ತೆಗೆದುಕೊಳ್ಳಬಹುದು. ಇದಕ್ಕೆ ಅಪವಾದ ಉನ್ನತ | ಕುಲಸಚಿವರು + ಕುಲಪತಿಗಳು |

| | | | |
|---|---|---|---|
| | | ಶಿಕ್ಷಣ ತರಬೇತಿ, ಆರೋಗ್ಯ ಸಮಸ್ಯೆ, ವಿದೇಶ ಪ್ರಯಾಣ, ಇತ್ಯಾದಿ. ರಜೆ ಗಣನೆ 120–120. ನಗದೀಕರಣ ಇರುವುದು. | |
| ಅರ್ಧವೇತನ ರಜೆ (Half Pay Leave) | 20 ದಿನಗಳು | ವೈದ್ಯಕೀಯ/ಖಾಸಗಿ/ಶೈಕ್ಷಣಿಕ ಉದ್ದೇಶಗಳಿಗೆ | ಕುಲಸಚಿವರು + ಕುಲಪತಿಗಳು |
| ಪರಿವರ್ತಿತ ರಜೆ (Commuted Leave) | ಅರ್ಧವೇತನ ರಜೆಯ ಅರ್ಧ | 240ಕ್ಕೆ ಮೀರದು. ಅರ್ಧವೇತನ ರಜೆಯಿಂದ ಕಡಿತಗೊಳಿಸುವುದು. ಸಿಬ್ಬಂದಿ ಹಿಂತಿರುಗುವ ನಂಬಿಕೆಯಿಂದ ನೀಡಲಾಗುವುದು | ಕುಲಸಚಿವರು + ಕುಲಪತಿಗಳು |
| ಅಸಾಮಾನ್ಯ ರಜೆ (Extraordinary Leave) | ವೇತನ ರಹಿತ | ವಾರ್ಷಿಕ ಬಡ್ತಿಗೆ ಪರಿಗಣಿಸಲಾಗುವುದಿಲ್ಲ. ಇದಕ್ಕೆ ಅಪವಾದ – ವೈದ್ಯಕೀಯ/ಗಲಭೆ/ಪ್ರಕೃತಿ ವಿಕೋಪ/ಉನ್ನತ ಶಿಕ್ಷಣ/ಸಂಶೋಧನ ಫೆಲೋಶಿಪ್ ಕಾರಣಗಳು. ಮೂರು ವರ್ಷಕ್ಕೆ ಮೀರದ್ದು (ವೈದ್ಯಕೀಯ ಕಾರಣಗಳಿಗೆ). ಜೀವಿತಾವಧಿಯಲ್ಲಿ ಐದು ಬಾರಿ ಮೀರದ್ದು. ಹಿಮ್ಮುಖವಾಗಿ ಸಾಧ್ಯ. | ಕುಲಸಚಿವರು + ಕುಲಪತಿಗಳು |
| ಅನೃಣ ರಜೆ (Leave not Due) | 180 ದಿನಗಳು | ಒಮ್ಮೆಯೇ 90 ದಿನಗಳ ರಜೆ ಸಾಧ್ಯ. ಅರ್ಧವೇತನ ರಜೆಯಿಂದ ಕಡಿತ. ಸಿಬ್ಬಂದಿ ಹಿಂತಿರುಗುವ ನಂಬಿಕೆಯಿಂದ ನೀಡಲಾಗುವುದು. ಹಿಂತಿರುಗದೇ ರಾಜೀನಾಮೆ ಅಂಗೀಕರಿಸಲಾಗದು. ನಿವೃತ್ತಿ ಸಂದರ್ಭದಲ್ಲಿ/ವಿಶೇಷ ಕಾರಣಗಳಿಗೆ/ ವಿಕಲತೆ ಕಾರಣಗಳಿಗೆ ಕಾರ್ಯಕಾರಿ ಸಮಿತಿಯಲ್ಲಿ ಮನ್ನಾ ಮಾಡಬಹುದು. | ಕುಲಸಚಿವರು + ಕುಲಪತಿಗಳು |
| ಅಧ್ಯಯನ ರಜೆ (Study Leave) | 2+1 ವರ್ಷಗಳು | ಮೂರು ವರ್ಷಗಳ ಸೇವೆಯ ನಂತರ ಸಂಶೋಧನೆ, ವಿಧಾನ, ವ್ಯವಸ್ಥೆ, ಮಾರ್ಗದರ್ಶನ, ನಿಕಾಯದಲ್ಲಿ ಶೇಕಡ ಪರಿಗಣಿಸಿ ನೀಡಬಹುದು. ಪ್ರಶಾಸನ ಸಮಿತಿಯ ನಿರ್ಧಾರ ಅಂತಿಮ. ನಿವೃತ್ತಿಗೆ ಐದು ವರ್ಷವಿರುವಾಗ ನೀಡಲಾಗುವುದಿಲ್ಲ. ಸೇವಾವಧಿಯಲ್ಲಿ ಗರಿಷ್ಠ ಐದು ಬಾರಿ. ಸಾಮಾನ್ಯ ಎರಡು ಬಾರಿ. ರಜೆ ಮುಗಿದ ನಂತರ ಕೂಡಲೇ ಹಿಂತಿರುಗಬೇಕು. ಉನ್ನತ ಸ್ಥಾನ ಬಾಕಿ ಇದ್ದಲ್ಲಿ ಹಿಂತಿರುಗಿದ ಕೂಡಲೇ ನೀಡಲಾಗುವುದು. ವಾರ್ಷಿಕ ವೇತನಬಡ್ತಿ ಇರುತ್ತದೆ. ಸೇವಾವಧಿ ಎಂದು ಪರಿಗಣಿಸಲಾಗುವುದು. ಹಿಂತಿರುಗದ ಪಕ್ಷದಲ್ಲಿ 12 ತಿಂಗಳ ನಂತರ ರದ್ದುಗೊಳಿಸಬಹುದು. ಮತ್ತೊಮ್ಮೆ ಅರ್ಜಿ ಸಲ್ಲಿಸಿ ಸ್ವೀಕರಿಸಬಹುದು. ಹಿಂತಿರುಗಿ ಮೂರು ವರ್ಷ ಸೇವೆ ಸಲ್ಲಿಸತಕ್ಕದ್ದು. ಬಾಂಡ್ ಇತ್ಯಾದಿಗಳನ್ನು ಸುರಕ್ಷತೆಗೆ ಸಲ್ಲಿಸಿ ತೆರಳತಕ್ಕದ್ದು. ವರದಿ ಸಲ್ಲಿಸದಿದ್ದರೆ ಸೆಮಿಸ್ಟರ್ ಇತ್ಯಾದಿ ವರದಿಗಳನ್ನು ಸಲ್ಲಿಸತಕ್ಕದ್ದು. | (ಡೀನ್ ಶಿಫಾರಸ್ಸಿನ ಮೇರೆಗೆ) ಕುಲಸಚಿವರು + ಕುಲಪತಿಗಳು |
| ಸಬ್ಬಾಟಿಕಲ್ / ಶೈಕ್ಷಣಿಕ (Sabbatical/ Academic Leave) | 1 ವರ್ಷ | 7 ವರ್ಷಗಳ ಸೇವಾವಧಿಯ ನಂತರ. ಸೇವಾವಧಿಯಲ್ಲಿ ಎರಡು ಬಾರಿ. ಅಧ್ಯಯನ ರಜೆಯೊಂದಿಗೆ ಇದನ್ನು ಸೇರಿಸಲಾಗುವುದಿಲ್ಲ. ಅಧ್ಯಯನ ರಜೆಯಿಂದ ಹಿಂತಿರುಗಿದ ನಂತರ ಐದು ವರ್ಷದ ಬಳಿಕ ವೇತನಸಹಿತ ತೆಗೆದುಕೊಳ್ಳಬಹುದು. ವಾರ್ಷಿಕ ವೇತನಬಡ್ತಿ ಇರುತ್ತದೆ, ಅಧ್ಯಯನ ರಜೆಯಂತೆ. | (ಡೀನ್ ಶಿಫಾರಸ್ಸಿನ ಮೇರೆಗೆ) ಕುಲಸಚಿವರು + ಕುಲಪತಿಗಳು |
| ಹೆರಿಗೆ ರಜೆ (Maternity Leave) | 135 ದಿನಗಳು | ಸೇವಾವಧಿಯಲ್ಲಿ ಎರಡು ಬಾರಿ. ಗರ್ಭಪಾತಕ್ಕೆ 45 ದಿನಗಳ ರಜೆ. ಇತರೆ ರಜೆಗಳೊಂದಿಗೆ ಮಿಶ್ರಗೊಳಿಸಬಹುದು. | ಕುಲಸಚಿವರು |
| ಪಿತೃತ್ವ ರಜೆ (Paternity Leave) | 15 ದಿನಗಳು | ಸೇವಾವಧಿಯಲ್ಲಿ ಎರಡು ಬಾರಿ ಮಾತ್ರ | ಕುಲಸಚಿವರು |
| ದತ್ತು ಸ್ವೀಕಾರ ರಜೆ (Adoption Leave) | 135 ದಿನಗಳು | ಕೇಂದ್ರ ಸರ್ಕಾರದ ನಿಯಮಗಳಂತೆ** | ಕುಲಸಚಿವರು |
| ಕ್ವಾರಂಟೈನ್ ರಜೆ (Quarantine Leave) | ಅಸಾಮಾನ್ಯ ಕಾರಣಗಳಿಗೆ | ಪ್ರಶಿಕ್ಷಣ ಪರಿಷತ್ತು/ಪ್ರಶಾಸನ ಸಮಿತಿ ನಿರ್ಧಾರಗಳಂತೆ | ಕುಲಪತಿಗಳು/ ಪ್ರಶಿಕ್ಷಣ ಪರಿಷತ್ತು/ ಪ್ರಶಾಸನ ಸಮಿತಿ |

* ಪರಿವಿಡಿ VI ಯುಜಿಸಿ ರಜೆ ನಿಯಮಾವಳಿ ಅಧಿಸೂಚನೆ ದಿನಾಂಕ: 24.12.1998ರಂತೆ ಮತ್ತು 14.01.2005ರ ಪತ್ರದಂತೆ, ಸಂಬಂಧಿತ ದಾಖಲೆ ಸಲ್ಲಿಸಿಕೆಯ ಆಧಾರದ ಮೇಲೆ ನೀಡಲಾಗುತ್ತದೆ.

** ಪತ್ರ ದಿನಾಂಕ: 31.03.2006, ಸಿಬ್ಬಂದಿ, ಸ್ನಾತಕೋತ್ತರ ಮತ್ತು ಪಿಂಚಣಿ ಸಚಿವಾಲಯ, ಭಾರತ ಸರ್ಕಾರ.

**ವಿಷಯ 13: ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜಿನಲ್ಲಿ ಖಾಲಿ ಇರುವ ಪ್ರಾಧ್ಯಾಪಕ ಹುದ್ದೆಗಳನ್ನು ಬಡ್ತಿ ಮೂಲಕ ಭರ್ತಿ ಮಾಡಿಕೊಳ್ಳಲು ಅನುಮತಿ ನೀಡುವ ಬಗೆಗೆ.**

ಟಿಪ್ಪಣಿ: ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು, ಬೆಂಗಳೂರು –ಇಲ್ಲಿ ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸುತ್ತಿದ್ದ ಪ್ರೊ. ಎ. ಗುರುಪ್ರಸಾದ್ ಅವರು ದಿನಾಂಕ: 31.08.2013ರಂದು ನಿವೃತ್ತರಾಗಿದ್ದಾರೆ. ಇದರಿಂದ ಖಾಲಿಯಾದ ಅಲಂಕಾರಶಾಸ್ತ್ರ ಪ್ರಾಧ್ಯಾಪಕ ಹುದ್ದೆಯನ್ನು ಡಾ. ತಿರುಮಲ ಅಲಿಯಾಸ್ ಜಯತೀರ್ಥ ಅವರಿಗೆ ಬಡ್ತಿ ನೀಡುವ ಮೂಲಕ ಭರ್ತಿ ಮಾಡಿಕೊಳ್ಳಲು ಹಾಗೂ ಡಾ. ಎಚ್. ಸತ್ಯನಾರಾಯಣರಾವ್ ಅವರನ್ನು ದಿನಾಂಕ: 08.10.2013ರಂದು ಪ್ರಾಚಾರ್ಯರ ಹುದ್ದೆಗೆ ನೇಮಕ ಮಾಡಿರುವುದರಿಂದ ತೆರವಾದ ನವೀನನ್ಯಾಯಶಾಸ್ತ್ರ ಪ್ರಾಧ್ಯಾಪಕ ಹುದ್ದೆಗೆ ಅದೇ ಶಾಸ್ತ್ರಭಾಗದ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ರಾಮವಿಠ್ಠಲ ಅವರನ್ನು ಆಡಳಿತ ಮಂಡಳಿಯು ನಿಯೋಜಿಸಿದ್ದು, ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ವಿವರಗಳನ್ನು ಪರಿಶೀಲಿಸಿ ಖಾಲಿ ಇರುವ ಪ್ರಾಧ್ಯಾಪಕ ಹುದ್ದೆಗಳಿಗೆ ಬಡ್ತಿ ಮೂಲಕ ಭರ್ತಿ ಮಾಡಿಕೊಳ್ಳಲು ಅನುಮೋದನೆಯನ್ನು ನೀಡಿತು.**

**ವಿಷಯ 14: ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜಿಗೆ ಅಧ್ಯಾಪಕರನ್ನು ನಿಯೋಜಿಸುವ ಬಗೆಗೆ.**

ಟಿಪ್ಪಣಿ: ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜಿನಲ್ಲಿ 2013–14ನೇ ಸಾಲಿನಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ವಿವರ ಹೀಗಿವೆ: ಋಗ್ವೇದ–19, ಕೃಷ್ಣಯಜುರ್ವೇದ–17, ಸಾಮವೇದ–7, ಅಥರ್ವವೇದ–18, ನವೀನನ್ಯಾಯ–7 ಮತ್ತು ವ್ಯಾಕರಣಶಾಸ್ತ್ರ–8. ಈ ಕಾಲೇಜಿನ ಪ್ರಭಾರಿ ಪ್ರಾಚಾರ್ಯರಾದ ವಿದ್ವಾನ್ ಕೆ. ಸತ್ಯನಾರಾಯಣ ಅವರು ದಿನಾಂಕ: 31.03.2014ರಂದು ನಿವೃತ್ತರಾಗಲಿದ್ದಾರೆ. ಸದರಿ ಕಾಲೇಜು ಸರ್ಕಾರಿ ಕಾಲೇಜಾಗಿದ್ದು, ವೇತನ ಬಟವಾಡೆಯ ಉದ್ದೇಶಕ್ಕೆ ಮಾತ್ರ ವಿಶ್ವವಿದ್ಯಾಲಯದ ಸಂಯೋಜನೆ ಹೊಂದಿದೆ. ಇಲ್ಲಿನ ನೇಮಕಾತಿ ಪ್ರಕ್ರಿಯೆಯು ಸರ್ಕಾರದ ಹಂತದಲ್ಲಿ ನಡೆಯಬೇಕಿದೆ. ಆದರೆ, 129 ವರ್ಷಗಳ ಹಳೆಯದಾದ ಈ ಕಾಲೇಜು, ಪ್ರಭಾರಿ ಪ್ರಾಚಾರ್ಯರ ನಿವೃತ್ತಿಯ ನಂತರ ಮುಚ್ಚುವ ಹಂತದಲ್ಲಿರುವ ಕಾರಣ, ವಿಶ್ವವಿದ್ಯಾಲಯದ ಸಂಯೋಜನೆ ಹೊಂದಿದ ಕಾಲೇಜುಗಳಲ್ಲಿನ ಅಧ್ಯಾಪಕರನ್ನು ಈ ಕಾಲೇಜಿಗೆ ಶಾಸ್ತ್ರವಾರು ನಿಯೋಜಿಸಬಹುದಾಗಿದ್ದು, ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: ಸಭೆಯು ಸಂಪೂರ್ಣವಾಗಿ ವಿವರಗಳನ್ನು ಪರಿಶೀಲಿಸಿತು. ಸಿ.ಎಲ್.ವೈ. ಸಂಸ್ಕೃತ ಕಾಲೇಜು, ಧಾರವಾಡ ಮತ್ತು ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜು, ಉಮ್ಮಚಗಿ –ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರಲ್ಲಿ ಅಗತ್ಯವಿರುವ ಮತ್ತು ಆಯಾಯ ಶಾಸ್ತ್ರಗಳಲ್ಲಿ ಪರಿಣತರಿರುವ ಅಧ್ಯಾಪಕರು ಹಾಗೂ ಆಡಳಿತ ಮಂಡಳಿ ಅಧ್ಯಕ್ಷರೊಡನೆ ಮಾನ್ಯ ಕುಲಪತಿಗಳು ಚರ್ಚಿಸಿ ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜಿಗೆ ನಿಯೋಜಿಸಲು ಕುಲಪತಿಗಳೇ ಕ್ರಮವಹಿಸಬಹುದೆಂದು ಸಭೆಯು ನಿರ್ಣಯಿಸಿತು.

**ವಿಷಯ 15: ಶ್ರೀ ಲಕ್ಷ್ಮೀನರಸಿಂಹ ಸಂಸ್ಕೃತ ಕಾಲೇಜು, ಜಮಖಂಡಿ –ಇಲ್ಲಿನ ವಿದ್ಯಾರ್ಥಿಗಳನ್ನು ಬೇರೆಡೆಗೆ ವರ್ಗಾಯಿಸುವ ಕುರಿತು ಪರಿಶೀಲಿಸಿದ ತ್ರಿಸದಸ್ಯ ಸಮಿತಿಯ ವರದಿಯನ್ನು ಅನುಷ್ಠಾನಗೊಳಿಸುವ ಬಗೆಗೆ.**

ಟಿಪ್ಪಣಿ: ದಿನಾಂಕ: 07.09.2013ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 9ನೇ ಸಭೆಯ ನಿರ್ಣಯದಂತೆ, ಶ್ರೀ ಲಕ್ಷ್ಮೀನರಸಿಂಹ ಸಂಸ್ಕೃತ ಕಾಲೇಜು, ಜಮಖಂಡಿ –ಇಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಬೇರೆಡೆಗೆ ವರ್ಗಾಯಿಸುವ ಕುರಿತು ಪರಿಶೀಲನೆ ನಡೆಸಲು ಪ್ರಶಾಸನ ಸಮಿತಿ, ಪ್ರಶಿಕ್ಷಣ ಪರಿಷತ್ತು ಹಾಗೂ ವಿಶ್ವವಿದ್ಯಾಲಯದ ಅಧಿಕಾರಿಯನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು ದಿನಾಂಕ: 26.11.2013ರಂದು ಸದರಿ ಕಾಲೇಜಿಗೆ ಭೇಟಿ ನೀಡಿ ಪರಿಶೀಲನಾ ವರದಿಯನ್ನು ಸಲ್ಲಿಸಿದೆ. ಈ ವರದಿಯನ್ನು ಅನುಷ್ಠಾನಕ್ಕೆ ತರಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: ಸಭೆಯು ಪರಿಶೀಲನಾ ವರದಿಯನ್ನು ಪರಿಶೀಲಿಸಿತು. ಆದರೆ, ವರದಿಯಲ್ಲಿ ಸ್ಪಷ್ಟ ವಿವರಗಳು ಇಲ್ಲದಿರುವ ಪ್ರಯುಕ್ತ ಮಾನ್ಯ ಕುಲಪತಿಗಳು ಸಂಬಂಧಿಸಿದ ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಸಹಪ್ರಾಧ್ಯಾಪಕರನ್ನು ಕರೆಸಿ, ಸಂಪೂರ್ಣ ವಿವರಗಳನ್ನು ಪರಿಶೀಲಿಸಿ ಕ್ರಮವಹಿಸಬಹುದೆಂದು ಸೂಚಿಸಿತು.

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರ ವಿಷಯಗಳು:**

**ವಿಷಯ 1: ಕಂಪ್ಯೂಟರ್ ಆಪರೇಟರ್ ಮತ್ತು ಟೆಲಿಫೋನ್ ಆಪರೇಟರ್ ಹುದ್ದೆಗಳ ನೇಮಕಕ್ಕೆ ಸಂಬಂಧಿಸಿದ ವೃಂದ ಮತ್ತು ನೇಮಕಾತಿ ಪರಿನಿಯಮದಲ್ಲಿನ ವಿದ್ಯಾರ್ಹತೆಯನ್ನು ತಿದ್ದುಪಡಿ ಮಾಡುವ ಬಗೆಗೆ.**

ಟಿಪ್ಪಣಿ: ಕಂಪ್ಯೂಟರ್ ಆಪರೇಟರ್ ಮತ್ತು ಟೆಲಿಫೋನ್ ಆಪರೇಟರ್ ಹುದ್ದೆಗಳ ನೇಮಕಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ಪರಿನಿಯಮದಲ್ಲಿ ವಿದ್ಯಾರ್ಹತೆಗಳನ್ನು ನಿಗದಿಪಡಿಸಿಕೊಳ್ಳಲಾಗಿದೆ. ಆದರೆ, ಆ ನಿಯಮಗಳಂತೆ ಮೇಲ್ಕಂಡ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ದೊರೆಯದ ಹಿನ್ನೆಲೆಯಲ್ಲಿ ಮತ್ತು ಟೆಲಿಫೋನ್ ಆಪರೇಟರ್ ಹುದ್ದೆಗೆ ನಿಗದಿಪಡಿಸಿದ ಕಂಟಿಫಿ ತರಬೇತಿಯನ್ನು ಕರ್ನಾಟಕ ರಾಜ್ಯ ತಾಂತ್ರಿಕ ಶಿಕ್ಷಣ ಸಂಸ್ಥೆಯು ನೀಡುತ್ತಿಲ್ಲದ ಕಾರಣ ಈ ಕೆಳಗಿನಂತೆ ವೃಂದ ಮತ್ತು ನೇಮಕಾತಿ ಪರಿನಿಯಮಕ್ಕೆ ತಿದ್ದುಪಡಿಯನ್ನು ಮಾಡಿ ಸರ್ಕಾರದಿಂದ ಅನುಮೋದನೆಯನ್ನು ಪಡೆಯಬಹುದಾಗಿದೆ.

| ಕ್ರ. ಸಂ. | ಹುದ್ದೆಯ ಪದನಾಮ ಮತ್ತು ವೇತನಶ್ರೇಣಿ | ಹುದ್ದೆಗಳ ಸಂಖ್ಯೆ | ಮೀಸಲಾತಿ ಬಿಂದು | ವೃಂದ ಮತ್ತು ನೇಮಕಾತಿ ನಿಯಮ | ಬದಲಾವಣೆ ಆಗಬೇಕಾದ ವಿವರ |
|---|---|---|---|---|---|
| 01 | ಕಂಪ್ಯೂಟರ್ ಆಪರೇಟರ್ ರೂ. 21600–40050 | 01 | ಮೀಸಲು ರಹಿತ | Must be a holder of I Class BE in Computer Science from a recognized University or Diploma in Computer Science awarded by Karnataka Technical Examination Board with 5 years experience in Data Entry or 5 years experience in the post of Computer. | Must be a holder of I Class BE in Computer Science from a recognized University or Diploma in Computer Science awarded by Karnataka Technical Examination Board with 5 years experience in Data Entry or 5 years experience in the post of Computer. |

| | | | | | |
|---|---|---|---|---|---|
| | | | | Vidwath Degree in any Traditional System in the field of specialization. | Also passed Sanskrit Sahitya Pariksha in Traditional System. |
| 02 | ಟೆಲಿಫೋನ್ ಆಪರೇಟರ್ ರೂ. 11600-21000 | 01 | ಪರಿಶಿಷ್ಟ ಜಾತಿ (ಅಂಗ ವಿಕಲ) | Must have passed SSLC or equivalent examination. **Should have studied Sanskrit Language in SSLC. Must have undergone training in PABX.** Preference given to physically challenged. | Must have passed SSLC or equivalent examination. **Should have studied Sanskrit Language in SSLC or passed in Samskrit Kavya examination. Must have 3 years experience in the post of Receptionist.** Preference given to physically challenged. |

ಮೇಲಿನಂತೆ ತಿದ್ದುಪಡಿಯನ್ನು ಮಾಡಲು ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ತಿದ್ದುಪಡಿ ಮಾಡಿದ ಕಂಪ್ಯೂಟರ್ ಆಪರೇಟರ್ ಮತ್ತು ಟೆಲಿಫೋನ್ ಆಪರೇಟರ್ ಹುದ್ದೆಗೆ ಬೇಕಾಗುವ ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ಒಪ್ಪಿಗೆ ನೀಡಿ, ವೃಂದ ಮತ್ತು ನೇಮಕಾತಿ ತಿದ್ದುಪಡಿಗೆ ಸರ್ಕಾರಕ್ಕೆ ಸಲ್ಲಿಸಿ ಕ್ರಮವಹಿಸಲು ಅನುಮೋದನೆ ನೀಡಿತು.**

**ವಿಷಯ 2: ಸಂಯೋಜಿತ ಕಾಲೇಜುಗಳ ಮಾನ್ಯತೆಯ ಸಂಬಂಧವಾಗಿ ಸರ್ಕಾರಕ್ಕೆ ವಿವರಗಳನ್ನು ಕಳುಹಿಸುವ ಬಗೆಗೆ.**

ಟಿಪ್ಪಣಿ: 2013-14ನೇ ಸಾಲಿನವರೆಗೆ ವಿಶ್ವವಿದ್ಯಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ನೂತನವಾಗಿ ಸಂಯೋಜಿತಗೊಂಡ ಕಾಲೇಜುಗಳಿಗೆ ಸಂಬಂಧಿಸಿದ ಸಮಸ್ತ ವಿವರಗಳನ್ನು ನಿಯಮಾನುಸಾರ ಸರ್ಕಾರಕ್ಕೆ ಕಳುಹಿಸಬೇಕಾಗಿದೆ.

ನಿರ್ಣಯ: **ಸಭೆಯು ಮೇಲ್ಕಂಡ ಅಂಶಕ್ಕೆ ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 3: ತುಮಕೂರು ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಪ್ರವೇಶ ಪಡೆದಿರುವ ಐವರಿಗೆ ವರ್ಗಾವಣೆ ಮೂಲಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಪ್ರವೇಶಾವಕಾಶ ನೀಡುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಾದ ಶ್ರೀ ರಾಜರಾಜೇಶ್ವರಿ ಸಂಸ್ಕೃತ ಕಾಲೇಜು, ಸ್ವರ್ಣವಲ್ಲೀ ಮತ್ತು ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜು, ಉಮ್ಮಚಗಿ -ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಳಕಂಡ ಅಧ್ಯಾಪಕರು ತುಮಕೂರು ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಕೋರ್ಸ್‌ವರ್ಕ್‌ಅನ್ನು ಮುಗಿಸಿರುತ್ತಾರೆ. ಈಗ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ವ್ಯಾಸಂಗವನ್ನು ವರ್ಗಾವಣೆ ಮೂಲಕ ಬಯಸಿರುತ್ತಾರೆ.

| ಕ್ರ.ಸಂ. | ಹೆಸರು/ ವಿಳಾಸ | ಹುದ್ದೆ/ ವಿದ್ಯಾರ್ಹತೆ | ನೋಂದಣಿ ಸಂಖ್ಯೆ |
|---|---|---|---|
| 01 | ನರಸಿಂಹ ನಾರಾಯಣ ಭಟ್ಟ<br>ಶ್ರೀ ರಾಜರಾಜೇಶ್ವರಿ ಸಂಸ್ಕೃತ ಕಾಲೇಜು,<br>ಸ್ವರ್ಣವಲ್ಲೀ, ಸೋಂದಾ, ಶಿರಸಿ | ಪ್ರಾಚಾರ್ಯರು<br>ನವೀನನ್ಯಾಯ ವಿದ್ವಾನ್, ಎಂ.ಎ. | 12SA5048 |
| 02 | ನಾಗರಾಜ ವೆಂಕಟರಮಣ ಭಟ್ಟ<br>ಶ್ರೀ ರಾಜರಾಜೇಶ್ವರಿ ಸಂಸ್ಕೃತ ಕಾಲೇಜು,<br>ಸ್ವರ್ಣವಲ್ಲೀ, ಸೋಂದಾ, ಶಿರಸಿ | ಪ್ರಾಧ್ಯಾಪಕರು<br>ಕೃಷ್ಣಯಜುರ್ವೇದ ವಿದ್ವಾನ್, ಎಂ.ಎ. | 12SA5047 |
| 03 | ರಾಮಚಂದ್ರ ನಾರಾಯಣ ಭಟ್ಟ<br>ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜು, ಉಮ್ಮಚಗಿ | ಪ್ರಾಚಾರ್ಯರು<br>ವ್ಯಾಕರಣ ವಿದ್ವಾನ್, ಎಂ.ಎ., ಬಿ.ಇಡಿ | 12SA5040 |
| 04 | ನರಸಿಂಹ ಭಟ್ಟ<br>ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜು, ಉಮ್ಮಚಗಿ | ಸಹಾಯಕ ಪ್ರಾಧ್ಯಾಪಕರು<br>ನವೀನನ್ಯಾಯ ವಿದ್ವಾನ್, ಎಂ.ಎ., ಬಿ.ಇಡಿ | 12SA5041 |
| 05 | ರಾಜೇಶ ಶಾಸ್ತ್ರೀ<br>ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜು, ಉಮ್ಮಚಗಿ | ಸಹಾಯಕ ಪ್ರಾಧ್ಯಾಪಕರು<br>ವ್ಯಾಕರಣ ವಿದ್ವಾನ್, ಎಂ.ಎ., ಬಿ.ಇಡಿ | 12SA5039 |

ನಿರ್ಣಯ: **ಸಭೆಯು ಮೇಲ್ಕಂಡ ವಿವರಗಳನ್ನು ಪರಿಶೀಲಿಸಿತು. ತುಮಕೂರು ವಿಶ್ವವಿದ್ಯಾಲಯದಿಂದ ವರ್ಗಾವಣೆಗೆ ಸಂಬಂಧಿಸಿದಂತೆ ಎನ್.ಓ.ಸಿ. ಹಾಗೂ ಇತರೆ ಪೂರಕ ಮಾಹಿತಿಗಳನ್ನು ಕಳುಹಿಸಿದ ನಂತರ ಪಿಎಚ್.ಡಿ. ಪದವಿಯ ಪ್ರವೇಶಾವಕಾಶಕ್ಕೆ ಒಪ್ಪಿಗೆ ನೀಡಬಹುದೆಂದು ಸೂಚಿಸಿತು.**

ಪ್ರೊ. ಪಿ.ಬಿ. ಸಂತಪ್ಪನವರ
ಸದಸ್ಯ ಕಾರ್ಯದರ್ಶಿ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಧ್ಯಕ್ಷರು